6.	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ	ಶೇ 37.36 (8.35)
7.	ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ	ಶೇ. 39.28 (5.5)
8.	ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ	ಶೇ. 39.28 (5.5)
9.	ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ	ಶೇ. 39.28 (5.5)
10.	ಕರ್ನಾಟ ಶಿಲ್ಪಕಲಾ ಅಕಾಡೆಮಿ	ಶೇ. 39.28 (5.5)
11.	ಕನ್ನಡ ಪುಸ್ತಕ ಪ್ರಾಧಿಕಾರ	ಶೇ 76.34 (38.17)

ಉ) ಹೌದು

ಊ) ಇದುವರೆಗೆ ಸಗಟು ಖರೀದಿ ಯೋಜನೆಯಡಿ ಖರೀದಿಸಿದ ಪುಸ್ತಕಗಳ ಮೊತ್ತ ವಿವರಗಳು ಕೆಳಗಿನಂತಿವೆ:

ವರ್ಷ	ವೆಚ್ಚ ಮಾಡಿದ ಅನುದಾನ ಲಕ್ಷಗಳಲ್ಲಿ
1997 ಪ್ರಕಟಣೆಗೆ	40.00
1998 "	25.43
1999ರ "	22.78
2000ರ "	28.58
2001ರ "	30.00
2002ರ "	19.05

ಸಗಟು ಖರೀದಿಗಾಗಿ ಈ ಸಾಲಿನಲ್ಲಿ ನಿರ್ದಿಷ್ಟವಾಗಿ ಹಂಚಿಕೆ ಮಾಡಿರುವುದಿಲ್ಲ.

.....

284 (657) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು).

ಆ) ಇವುಗಳಲ್ಲಿ ಕೆಲಸ ನಿರ್ವಹಿಸುವ ಆಯಾಗಳು ದಿನಗೂಲಿ ನೌಕರರೇ ಅಥವಾ ಖಾಯಂ ನೌಕರರೇ (ಇವರ ಸಂಖ್ಯೆ ವಿವರ ನೀಡುವುದು).

ಇ) ಇಂತಹವರುಗಳ ಸೇವೆಯನ್ನು ಯಾವಾಗಿನಿಂದ ಪಡೆಯಲಾಗುತ್ತಿದೆ ಹಾಗೂ ಇವರಿಗೆ ನೀಡುತ್ತಿರುವ ವೇತನವೆಷ್ಟು;

ಈ) ಈ ಪೈಕಿ ಎಷ್ಟು ಜನ ಆಯಾಗಳನ್ನು ಖಾಯಂಗೊಳಿಸಲಾಗಿದೆ.

ಉ) ಖಾಯಂಗೊಳಿಸದೇ ಇರುವವರ ಸೇವೆಯನ್ನು ಏನೆಂದು ಪರಿಗಣಿಸಲಾಗುತ್ತದೆ ಹಾಗೂ ಈ ಬಗ್ಗೆ ಸರ್ಕಾರದ ನಿಲುವೇನು (ಪೂರ್ಣ ಮಾಹಿತಿ ಒದಗಿಸುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಯಾವುದೂ ಇರುವುದಿಲ್ಲ. ಈ ಹಿಂದೆ ಅಸ್ತಿತ್ವದಲ್ಲಿದ್ದ 2092 ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಸರ್ಕಾರಿ ಆದೇಶ ಸಂಖ್ಯೆ 35 ಪಿಬಿಎಸ್ 97 ಬೆಂಗಳೂರು ದಿ: 22.03.1999 ರ ಆದೇಶದಂತೆ ಅಂಗನವಾಡಿ ಕೇಂದ್ರಗಳಿಗೆ ವಿಲೀನಗೊಳಿಸಿ, ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಾಲಾ ಮಾತೆಯರನ್ನು ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರೆಂದು ವಿಲೀನಗೊಳಿಸಿದೆ.

ಆ) ದಿನಗೂಲಿ ಆಯಾಗಳಾಗಲಿ ಅಥವಾ ಖಾಯಂ ಆಯಾಗಳಾಗಲಿ ಇರುವುದಿಲ್ಲ. ರಾಜ್ಯದಲ್ಲಿ 2550 ಸರ್ಕಾರಿ ಶಾಲಾ ಆಯಾಗಳು ಇರುತ್ತಾರೆ.

ಇ) ನಿಖರವಾಗಿರುವುದಿಲ್ಲ. ಇವರಿಗೆ ಮಾಸಿಕ ಗೌರವ ಧನ ರೂ. 800/– ನೀಡಲಾಗುತ್ತಿದೆ.

ಈ) ಋ) ಆಯಾಗಳನ್ನು ಯಾವುದೇ ನೇಮಕಾತಿ ನಿಯಮಾವಳಿಗಳಡಿ ನೇಮಕ ಮಾಡಿರುವುದಿಲ್ಲ. ಇವರಿಗೆ ಕನಿಷ್ಠ ವಿದ್ಯಾರ್ಹತೆಯಾಗಲಿ ವಯೋಮಿತಿಯ ನಿರ್ಬಂಧವಾಗಲಿ ಇರುವುದಿಲ್ಲ. ಆದ್ದರಿಂದ ಆಯಾಗಳ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

.....

285 (658) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಐ.ಎ.ಎಸ್., ಐ.ಪಿ.ಎಸ್. ಐ.ಎಫ್.ಎಸ್., ಕೆ.ಎ.ಎಸ್. ಮತ್ತು ರಾಜ್ಯದ ಹಿರಿಯ ಅಧಿಕಾರಿಗಳು ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಹೊಂದಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ;

ಆ) ಸರ್ಕಾರಕ್ಕೆ ಇರುವ ಮಾಹಿತಿಯಂತೆ ಯಾವ ಯಾವ ಅಧಿಕಾರಿಗಳು ಒಂದಕ್ಕಿಂತ ಹೆಚ್ಚು ನಿವೇಶನ ಹೊಂದಿದ್ದಾರೆ;

ಇ) ಇಂತಹ ಪ್ರಕರಣದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಇದುವರೆಗೂ ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ ಹಾಗೂ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು

ಆ) ಸರ್ಕಾರದಲ್ಲಿ ಲಭ್ಯವಿರುವ ಮಾಹಿತಿಯಂತೆ ಅಧಿಕಾರಿಗಳ ಪಟ್ಟಿಯನ್ನು ಅನುಬಂಧ–I ರಲ್ಲಿ ನೀಡಲಾಗಿದೆ.

ಇ) ಸರ್ಕಾರ ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ. ಸಿಆಸುಇ 197 ಎಸ್ಎಂಇ 2002, ದಿನಾಂಕ 29.10.2002ರ ರೀತ್ಯಾ ಕ್ರಮ ಜರುಗಿಸಲಾಗಿರುತ್ತದೆ.

ಈ) ಮೇಲೆ (ಇ) ನಂತೆ ಕ್ರಮ ಜರುಗಿಸಲಾಗಿದೆ. ಅಧಿಕಾರಿಗಳ ಪಟ್ಟಿಯನ್ನು ಅನುಬಂಧ–II ರಲ್ಲಿ ನೀಡಲಾಗಿದೆ.